# ಸಾಧನೆಯ ಹಾದಿಯಲ್ಲಿ...

## ಸಾಧನೆಯ ಮಹತ್ವ

### ಆಧುನಿಕ ನಾಗರಿಕತೆ ಮತ್ತು ಸ್ವಾಸ್ಥ್ಯ ಜೀವನ

ಪ್ರತಿಯೊಬ್ಬ ವ್ಯಕ್ತಿಯೂ 'ಜಡ' ಮತ್ತು 'ಚೈತನ್ಯ' – ಈ ಎರಡು ಬಗೆಯ ಅಂಶಗಳನ್ನು ತನ್ನ ದೈನಂದಿನ ಜೀವನದಲ್ಲಿ ಅನುಭವಕ್ಕೆ ತಂದುಕೊಳ್ಳುತ್ತಾನೆ. ಅವನಿಗೆ ಬಾಹ್ಯ ವಸ್ತುಗಳ ಅರಿವೂ ಇರುತ್ತದೆ; ಹಾಗೆಯೇ ಆಂತರಿಕವಾಗಿ ನಾನು ಎಂಬ ಪ್ರಜ್ಞೆಯೂ ಇರುತ್ತದೆ. ಬಾಹ್ಯ ವಸ್ತುಗಳಿಗೆ ಸ್ವಪ್ರಜ್ಞೆ ಇಲ್ಲ. ಆದ್ದರಿಂದ ಅವು ಜಡ. ಸ್ವಪ್ರಜ್ಞೆ ಇಲ್ಲದೆ ಮಾನವನ ಅಸ್ತಿತ್ವವೇ ಇಲ್ಲ. ಆದ್ದರಿಂದ ಅವನು ಚೈತನ್ಯ ಸ್ವರೂಪ. ಇದು ವಾಸ್ತವ ಸಂಗತಿ.

ಆದರೆ ಮನುಷ್ಯ ಇಬ್ಬಂದಿಯಲ್ಲಿ ಬಳಲುತ್ತಾನೆ. ಅವನು ತನ್ನ ಸ್ವಪ್ರಜ್ಞೆಯ ಅಂಶವಾದ ಚೈತನ್ಯಾಂಶವನ್ನು ಪೂರ್ಣವಾಗಿ ನೆಚ್ಚಿಕೊಂಡು ಬಾಳುವುದಿಲ್ಲ. ಹಾಗೆಂದು ಜಡ ವಸ್ತುಗಳನ್ನು ಕೂಡ ಸಂಪೂರ್ಣವಾಗಿ ಅವಲಂಬಿಸಿ ಅವನಿಗೆ ಜೀವಿಸಲು ಸಾಧ್ಯವಾಗುವುದಿಲ್ಲ. ಅವನು ತನ್ನ ಅಂತರಾಳಕ್ಕೆ ದುಮುಕಿ ಅಲ್ಲಿಯೇ ಸ್ವಸ್ಥವಾಗಿ ನೆಲೆನಿಲ್ಲಲಾರ. ಅದೇ ರೀತಿ ಬಾಹ್ಯ ಜಗತ್ತಿನ ಜೊತೆಗೆ ಒಂದಾಗಿಯೂ ಬದುಕಲಾರ.

> **ಚೈತನ್ಯಪ್ರಧಾನವಾದ ವಿಜ್ಞಾನಕ್ಕಿಂತ ಜಡ ಪದಾರ್ಥಗಳ ವಿಜ್ಞಾನಗಳು ಗಳಿಸಿದ ಅಗಾಧ ಮುನ್ನಡೆಯೇ ಮಾನವ ಜನಾಂಗವನ್ನು ಸಂಕಷ್ಟಕ್ಕೆ ಈಡು ಮಾಡಿರುವ ಅತ್ಯಂತ ಘೋರವಿನಾಶಗಳಲ್ಲಿ ಒಂದು.**
>
> *–ಅಲೆಕ್ಸಿಸ್ ಕ್ಯಾರೆಲ್*

ಮಾನವನ ಇತಿಹಾಸದ ಉದ್ದಕ್ಕೂ ನಾವು ಕಾಣುವುದು ಒಂದು ಬಗೆಯ ಹೋರಾಟವನ್ನೇ. ಮಾನವನು ತಾನು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು, ಜಡವನ್ನೇ ಇಲ್ಲಾ ಚೈತನ್ಯವನ್ನೇ ಎಂದು ತೊಳಲಾಡುತ್ತಾನೆ. ಒಮ್ಮೆ ಅವನು ಜಡದತ್ತ ಓಲುತ್ತಾನೆ. ಅಲ್ಲಿ ಸುಖ ಕಾಣದೆ, ಚೈತನ್ಯದತ್ತ ಓಲುತ್ತಾನೆ. ಆದರೆ ಅದರಲ್ಲೂ ಸ್ಥಿರವಾಗಿರದೆ ಬಳಲುತ್ತಾನೆ. ಪ್ರತಿಯೊಬ್ಬ ಮಾನವನ ಜೀವಿತವೂ ಈ ಆಯ್ಕೆಯ ಸಂದಿಗ್ಧತೆಯ ಕತೆಯೆಂದೇ ಹೇಳಬಹುದು.

ಸಂತುಲತೆ ಪ್ರಕ್ಷುಬ್ಧತೆಯನ್ನು ಹೋಗಲಾಡಿಸುತ್ತದೆ, ಸ್ಥಿರತೆಯನ್ನೂ ಮತ್ತು ಅದರಿಂದ ಉಂಟಾಗುವ ಸಮಾಧಾನವನ್ನೂ ತಂದುಕೊಡುತ್ತದೆ. ಮಾನವನ ಅಸ್ತಿತ್ವಕ್ಕೆ ಸಂಬಂಧಪಟ್ಟ ಸಮಸ್ಯೆಗಳೆಲ್ಲಕ್ಕೂ ಕಾರಣ ಆತನ ಜೀವಿತದಲ್ಲಿ ಸಂತುಲತೆ ಇಲ್ಲದಿರುವುದೇ ಎಂದು ಮಹರ್ಷಿ ಅರವಿಂದರು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ, ಯಾವುದೋ ಒಂದು ಬಗೆಯ ಐಕ್ಯತೆಯನ್ನು ಮಾನವನು ಇನ್ನೂ ಸಾಧಿಸಲು ವಿಫಲನಾಗಿರುವುದೇ ಸಂತುಲತೆಯ ಅಭಾವಕ್ಕೆ ಕಾರಣ. ಜಡ ಮತ್ತು ಚೈತನ್ಯಗಳ ನಡುವೆ ಯಾವ ಬಗೆಯ ಸಂತುಲತೆಯನ್ನೂ ಮಾನವನು ಸಾಧಿಸಲು ಇದುವರೆಗೆ ಸಫಲನಾಗಿಲ್ಲ, ಇನ್ನು ಮುಂದೆಯೂ ಸಫಲನಾಗುವುದು ಅಸಾಧ್ಯ. ಹೀಗಾಗಿ ಈ ವಿರೋಧಾಭಾಸ ಯಾವತ್ತೂ ಮಾನವ ಜೀವಿತದ ಅವಿಭಾಜ್ಯ ಅಂಗವಾಗಿಯೇ ಉಳಿಯುತ್ತದೆಯೇನೋ ಎಂಬ ಸಂದೇಹ ನಮ್ಮನ್ನು ಕಾಡುತ್ತದೆ.

ಈ ಬಗೆಯ ಇಬ್ಬಂದಿತನ, ತ್ರಿಶಂಕುವಿನ ಸ್ಥಿತಿ ಮಾನವನಲ್ಲಿ ಅಸುರಕ್ಷತೆಯ ಭಾವನೆಯನ್ನು ಉಂಟುಮಾಡುತ್ತದೆ. ಮಾನವನು ಬಾಹ್ಯದೃಷ್ಟಿಯಲ್ಲಿ ನಾಗರಿಕನಾದಂತೆಲ್ಲ, ಆಂತರಿಕವಾಗಿ ಈ ವಿರೋಧಾಭಾಸದ ದಾರುಣ ಸ್ಥಿತಿಯೂ ಹೆಚ್ಚು ಭೀಕರವಾಗುತ್ತ ಹೋಗುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಪ್ರಸಿದ್ಧ ಮನೋಶಾಸ್ತ್ರಜ್ಞ ಕಾರ್ಲ್ ಯೂಂಗ್ ತನ್ನ The Spiritual Problem of Modern Man ಎಂಬ ಪ್ರಬಂಧದಲ್ಲಿ ಈ ಸಮಸ್ಯೆಯನ್ನು ವಿಶ್ಲೇಷಿಸುವುದು ಹೀಗೆ : ಆಧುನಿಕ ಮಾನವನು ಹಳೆಯ ಕಂದಾಚಾರಗಳನ್ನು, ಸಂಪ್ರದಾಯಗಳನ್ನು ಮುರಿದು ಅವುಗಳ ಬಂಧನದಿಂದ ಮೇಲೇರಿದ್ದೇನೆ ಎಂದುಕೊಳ್ಳುತ್ತಾನೆ. ಆದರೆ, ಅವುಗಳ ಜಾಗದಲ್ಲಿ, ತನ್ನ ಜೀವಿತಕ್ಕೆ ಸ್ಥಿರತೆಯನ್ನು ತಂದುಕೊಡುವ ಹೊಸದೇನನ್ನೂ ಬರಮಾಡಿಕೊಳ್ಳಲಾಗದೆ, ಅಸ್ಥಿರತೆಯಿಂದ ಬಳಲುತ್ತಾನೆ. ಈ ಅಸ್ಥಿರತೆಯೇ ನಾಗರಿಕ ಸಮಾಜದ ಒಂದು ಪ್ರಮುಖ ಲಕ್ಷಣವಾಗಿದೆ. ನಾವು ನಮ್ಮ ಅಂತರಾಳದ ಜೀವನವನ್ನು ಹಾಳು ಮಾಡಿಕೊಂಡಿದ್ದೇವೆ. ಆ ಮೂಲಕ ಮಾನವರಾಗಿ ನಮ್ಮ ಮೌಲ್ಯವನ್ನು ಕಡಮೆ ಮಾಡಿಕೊಂಡಿದ್ದೇವೆ.

ಕಾರ್ಲ್ ಯೂಂಗ್‌ನ ಪ್ರಕಾರ ನಾಗರಿಕತೆ ಮತ್ತು ಆರ್ಥಿಕ ಪ್ರಗತಿಗಳು ಒದಗಿಸಿರುವ 'ಭೌತಿಕ ಸ್ಥಿರತೆ' ಯು ಮಾನವನ ಅಂತರಂಗದ 'ಆಧ್ಯಾತ್ಮಿಕ ಅಸ್ಥಿರತೆ' ಯನ್ನು ಕಡಮೆ ಮಾಡುವುದಿರಲಿ, ಇನ್ನೂ ಉಲ್ಬಣಗೊಳಿಸಿದೆ. 'ಭೌತಿಕ ಪ್ರಗತಿ'ಯ ಕಡೆಗೆ ಇಡುವ ಒಂದೊಂದು ಹೆಜ್ಜೆಯೂ ಅಭದ್ರತೆಯ ಭಯಾನಕ ಪರಿಸ್ಥಿತಿಯ ಸಾಧ್ಯತೆಯನ್ನು ಅಧಿಕವನ್ನಾಗಿ ಮಾಡಿದೆ.

ಎರಿಕ್ ಫ್ರೋಮ್ ಎಂಬ ಸಾಮಾಜಿಕ ಮನಃಶಾಸ್ತ್ರಜ್ಞನು, ಭೌತಿಕ ಸಂಪತ್ತಿನ ಬಯಕೆ ಮತ್ತು ಗಳಿಕೆಗಳು ಸ್ವಸ್ಥ ಜೀವನವನ್ನು

ತಂದುಕೊಡಲಾರವು ಎಂದು ಅಭಿಪ್ರಾಯಪಡುತ್ತಾನೆ. ಅವನ ಪ್ರಕಾರ, ನಾವು ನಮ್ಮ ಅಭೀಪ್ಸೆಗಳೆಲ್ಲವನ್ನೂ ಯಾವ ಲಂಗು ಲಗಾಮೂ ಇಲ್ಲದೆ, ಪೂರ್ತಿಗೊಳಿಸಲು ಯತ್ನಿಸುವುದು ಸಂತಸದ ಸಾಧನೆಯ ಮಾರ್ಗವಾಗಲಾರದು. ಹಾಗೆಯೇ ಆ ಮೂಲಕ ನಮ್ಮ ಜೀವನಕ್ಕೆ ನಾವು ಒಡೆಯರಾಗುವ ಕನಸೂ ನನಸಾಗ ಲಾರದು. ಏಕೆಂದರೆ ಪ್ರಸ್ತುತ ನಾವು, ನಾವಿರುವ ಸಾಮಾಜಿಕ ಅಥವಾ ರಾಜಕೀಯ ವ್ಯವಸ್ಥೆಯ ಗುಲಾಮರಾಗಿದ್ದೇವೆ. (*To have or To be*, p.XXIV)

ವಿಜ್ಞಾನವು ನಾವಿರುವ ಜಗತ್ತಿನ ಅರಿವನ್ನು ಮಾಡಿಕೊಟ್ಟು, ಆ ಮೂಲಕ ನಮ್ಮ ಜೀವನವನ್ನು ಸಮೃದ್ಧಗೊಳಿಸುತ್ತದೆ ಎಂದು ಹಿಂದಿನ ಶತಮಾನಗಳಲ್ಲಿ ನಂಬಲಾಗಿತ್ತು. ಆದರೆ ಅಂತಹ ಮಹದಾಶೆ ಇಂದು ನುಚ್ಚುನೂರಾಗಿರುವುದನ್ನು ನಮ್ಮ ಕಣ್ಣಮುಂದೆಯೇ ನಾವು ಕಾಣಬಹುದು.

ವಿಜ್ಞಾನದ ಇನ್ನೊಂದು ಮುಖವೇ ತಾಂತ್ರಿಕತೆ. ಅದು ಮಾನವನ ಸುಖದ ಗಳಿಕೆಯ ಮತ್ತು ಉಪಭೋಗದ ತೀವ್ರತೆಯನ್ನು ಉತ್ಕಟಗೊಳಿಸುತ್ತದೆ. ಆದರೆ ಅದರ ಜೊತೆಜೊತೆಗೆ ಆಂತರಿಕವಾಗಿ ಅವನನ್ನು ಅಪಮೌಲ್ಯಗೊಳಿಸುತ್ತದೆ. ಈ ಅಂಶವನ್ನು ಡಾ. ಎಸ್. ರಾಧಾಕೃಷ್ಣನ್ ಮಾರ್ಮಿಕವಾಗಿ ಹೀಗೆ ಬಣ್ಣಿಸುತ್ತಾರೆ: "ಮನುಷ್ಯನಾಗಿರುವುದು ಎಂದರೆ, ವಿಶ್ವಾಸಾರ್ಹನಾಗಿರುವುದು, ದಯೆಯಿಂದ ಕೂಡಿರುವುದು, ಸಹಕಾರ ಮನೋಭಾವ ಹೊಂದಿರುವುದು ಮತ್ತು ಪ್ರತಿಸ್ಪಂದಿಸುವ ಗುಣ ಹೊಂದಿರುವುದು. ಆದರೆ, ಆಧುನಿಕ ಸಮಾಜದ ತಾಂತ್ರಿಕ ವ್ಯವಸ್ಥೆಯು ವ್ಯಕ್ತಿಯೊಬ್ಬನ ಮಹತ್ವವನ್ನು ಗೌಣವಾಗಿಸುತ್ತಿದೆ ಮತ್ತು ಮಾನವನ ಅಂತಸ್ಸತ್ವದ ಬಗ್ಗೆ ಮೂಲಭೂತ ಸಿನಿಕತನವನ್ನು ಹೊಂದಿದ್ದು, ಅದರ ಬಗ್ಗೆ ನಕಾರಾತ್ಮಕ ಭಾವನೆಯನ್ನೇ ಉತ್ತೇಜಿಸುತ್ತದೆ." (*Recovery of Faith*, p.21)

## ಭೌತಿಕತೆಯ ಆಚೆಗೆ

ಹೀಗೆ ಭೌತಿಕ ಪ್ರಗತಿಯು ಮಾನವನ ಪ್ರಾಥಮಿಕ ಆಶೋತ್ತರವನ್ನು ಪೂರ್ತಿಗೊಳಿಸಲು ವಿಫಲವಾಗಿರುವುದು ಅಸಹಜವೇನಲ್ಲ. ಏಕೆಂದರೆ ಮಾನವನ ಈ ಮೂಲಭೂತ ಬಯಕೆಯು ಭೌತಿಕತೆಯಲ್ಲಿ ಎಂದಿಗೂ ತೃಪ್ತಿಗೊಳ್ಳುವುದೇ ಇಲ್ಲ. ಪ್ರತಿಯೊಬ್ಬ ಮಾನವನು ಭೌತಿಕತೆಯು ತನ್ನನ್ನು ಸೀಮಿತಗೊಳಿಸಿರುವ ಸರಹದ್ದನ್ನು ಮೀರಿಹೋಗಲು ಪ್ರಯತ್ನಿಸುತ್ತಾನೆ. ಹೀಗೆಂದೇ ಎಷ್ಟೇ ಭೌತಿಕ ಸಂಪತ್ತೂ ಅವನ ಅಂತರಾತ್ಮವನ್ನು ಸಂತೃಪ್ತಗೊಳಿಸುವುದಿಲ್ಲ. ಮಹರ್ಷಿ ಅರವಿಂದರು ಹೇಳುವಂತೆ, ಪರಿಶುದ್ಧ ಸತ್ಯ ಮತ್ತು ಕಾಲುಷ್ಯರಹಿತ ಆನಂದಗಳನ್ನು ಅರಸುವುದೇ ಮಾನವನೊಬ್ಬನ ಸ್ವಾಭಾವಿಕ ಅನ್ವೇಷಣೆಯಾಗಿದೆ. ಅದನ್ನು ಜಡ ಅಥವಾ ಭೌತಿಕ ಜಗತ್ತು ಎಂದಿಗೂ ನೀಡಲಾರದು.

ಸ್ವಾಮಿ ವಿವೇಕಾನಂದರು ಅದನ್ನು ಇನ್ನೊಂದು ಆಯಾಮದಲ್ಲಿ ವಿವರಿಸುತ್ತಾರೆ. ಅವರ ಪ್ರಕಾರ ಮನುಷ್ಯನು ಭೌತಿಕ ಚೌಕಟ್ಟಿನಲ್ಲಿಯೇ ಅನಂತತೆಯನ್ನೂ, ನಿತ್ಯತೆಯನ್ನೂ ಕಾಣಲು ಯತ್ನಿಸುತ್ತಾನೆ. ಜನಸಮಾನ್ಯರಲ್ಲಿ ಅವರ ಅರಿವಿಲ್ಲದೆಯೇ ಕಂಡುಬರುವ ಈ ಬಗೆಯ ಪ್ರಯತ್ನವನ್ನೇ, ಪ್ರಜ್ಞಾಪೂರ್ವಕವಾಗಿ ಭೌತಿಕ ವಿಜ್ಞಾನವು ಕೈಗೊಳ್ಳುತ್ತದೆ; ಪರಿಪೂರ್ಣತೆಯನ್ನೂ ಅನಂತತೆಯನ್ನೂ ಭೌತಿಕ ಆಯಾಮದ ಪರಿಧಿಯೊಳಗೆ ಅನ್ವೇಷಿಸುತ್ತದೆ. ಆದರೆ ಈ ಪ್ರಯತ್ನದಲ್ಲಿ ಅದು ಇನ್ನೂ ಸಫಲತೆಯನ್ನು ಗಳಿಸಿಲ್ಲ; ಗಳಿಸುವುದೂ ಅಸಾಧ್ಯ.

## ಅತೀಂದ್ರಿಯತೆಯತ್ತ ದಾಪುಗಾಲು

ಮಾನವ ದೇಹವು ಭೌತಿಕ ಸೃಷ್ಟಿಯಾದರೂ, ಅದರೊಳಗೆ ಮನೆಮಾಡಿಕೊಂಡಿರುವ ಅಂತರಾತ್ಮವು ಚೈತನ್ಯಸ್ವರೂಪದ್ದಾಗಿದೆ. ಅದು ತನ್ನ ನೈಜಸ್ವರೂಪವನ್ನು ಪರಿಪೂರ್ಣವಾಗಿ ಪ್ರಕಟಪಡಿಸಲು ಹವಣಿಸುತ್ತದೆ. ಈ ಪ್ರಯತ್ನದಲ್ಲಿ ಸಫಲವಾಗುವ ತನಕ ಮಾನವ ಜೀವಿಯು ಸಾರ್ಥಕತೆಯನ್ನು ಪಡೆಯಲಾರನು.

ಆದರೆ ಚೈತನ್ಯವು ಅನಂತವಾದ ಪರಿಧಿ ಉಳ್ಳದ್ದು. ಅದರ ಅರಿವು ಭೌತಿಕವಾದ ಇಂದ್ರಿಯಗಳಿಂದ ಸಾಧ್ಯವಿಲ್ಲ. ಶ್ರೀಶಂಕರಾಚಾರ್ಯರು ತಮ್ಮ ಕಠೋಪನಿಷತ್ತಿನ ಭಾಷ್ಯದಲ್ಲಿ ಈ ಅಂಶವನ್ನು ಹೀಗೆ ವಿವರಿಸುತ್ತಾರೆ: "ಕಿವಿ, ಕಣ್ಣು ಮುಂತಾದ ಇಂದ್ರಿಯಗಳು ಶಬ್ದ, ರೂಪ ಮುಂತಾದ ತಮ್ಮ ವಿಷಯಗಳನ್ನು ಅರಿಯುವ ಪ್ರಯೋಜನಕ್ಕಾಗಿ ಮಾತ್ರ ಹುಟ್ಟಿವೆ. ಹೀಗಾಗಿ ಇವು ಆತ್ಮನಿಗಿಂತ ಬೇರೆ ಸ್ವಭಾವವುಳ್ಳವು. ಅವುಗಳಿಗಿಂತ ಒಳಗೆ, ಅಂತರಾಳದಲ್ಲಿ, ಆತ್ಮವು ವೇದ್ಯವಾಗಬಲ್ಲುದು. ಹೀಗಾಗಿ ಆತ್ಮನ ರೂಪವು ಇಂದ್ರಿಯಗಳ ಗ್ರಹಿಕೆಗೆ ವಿಷಯವಾಗಲು ಸಾಧ್ಯವಿಲ್ಲ. ಕಣ್ಣು ಮೊದಲಾದ ಯಾವ ಇಂದ್ರಿಯವೂ ಆತ್ಮನನ್ನು ನೋಡಲಾರದು." (ಭಾಷ್ಯದ ಸಾರಾಂಶ, ಮಂತ್ರ ೨-೬-೬, ೯)

ಇಷ್ಟಾದರೂ ಮಾನವನು ಅನಂತತೆಯನ್ನು ಸಾಂತವಾದ ತನ್ನ ಇಂದ್ರಿಯಗಳ ಪರಿಧಿಯೊಳಗೆ ತಂದುಕೊಳ್ಳಲು ಪ್ರಯತ್ನಪಡುತ್ತಲೇ ಇರುವನು. ಸ್ವಾಮಿ ವಿವೇಕಾನಂದರು ಇಂಥ ಪ್ರಯತ್ನವು ಎಂದಿಗೂ ಸಫಲವಾಗದೆಂದು ಸ್ಪಷ್ಟವಾಗಿ ಹೇಳುತ್ತಾರೆ. ಯಾವಾಗ ಮನುಷ್ಯ ಈ ವಾಸ್ತವಾಂಶವನ್ನು ಅರಿಯುತ್ತಾನೆಯೋ, ಆಗ ಅವನು ಮೇಲಿನ ಪ್ರಯತ್ನವನ್ನು ಕೈಬಿಡುತ್ತಾನೆ. ಇದನ್ನೇ 'ತ್ಯಾಗ' ಎಂದು ಸ್ವಾಮೀಜಿ ಹೆಸರಿಸುತ್ತಾರೆ. ಅದರ ಜೊತೆಜೊತೆಗೇ, ಅಂಥ ವ್ಯಕ್ತಿ ಇಂದ್ರಿಯಗ್ರಾಹ್ಯತೆಯನ್ನು ಮೀರಿರುವ ಅರಿವಿನ ಆಯಾಮಗಳನ್ನೂ ಅನ್ವೇಷಿಸುತ್ತಾನೆ. ಸ್ವಾಮಿ ವಿವೇಕಾನಂದರ ಪ್ರಕಾರ, ಹೀಗೆ ತ್ಯಾಗವೇ ಇಂದ್ರಿಯಾತೀತ ಅನುಭವಕ್ಕಾಗಿ ಮಾನವನನ್ನು ಪ್ರಚೋದಿಸುತ್ತದೆ. ಈ ಪ್ರಯತ್ನವನ್ನೇ ನಾವು 'ಧರ್ಮ' ಎಂದು ಕರೆಯುವುದು.

ಭೌತಿಕತೆಯಿಂದ ವಿಮುಖಗೊಳ್ಳುವುದು ಮಾತ್ರವೇ ಧರ್ಮದ

ಲಕ್ಷಣವಲ್ಲ. ಆ ಮೂಲಕ ಅಂತರಾತ್ಮನ ಪ್ರಕಾಶನವೇ, ಚೈತನ್ಯದ ಪರಿಪೂರ್ಣ ಆವಿಷ್ಕಾರವೇ ಧರ್ಮದ ಮುಖ್ಯ ಉದ್ದೇಶ.

ಇದು ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ವಿಲಿಯಮ್ ಜೇಮ್ಸ್‌ನ ಅಭಿಪ್ರಾಯವೂ ಹೌದು. ಆತನು ನೀಡಿರುವ ಧರ್ಮದ ಈ ವ್ಯಾಖ್ಯಾನ ಇದನ್ನು ಪುಷ್ಟಿಗೊಳಿಸುತ್ತದೆ : "ಏಕಾಂತದಲ್ಲಿರುವ ವ್ಯಕ್ತಿಗಳು ತಾವು ದಿವ್ಯತೆ ಎಂದು ಪರಿಗಣಿಸುವ ಯಾವುದೋ ಒಂದರ ಜೊತೆಗೆ ತಾವು ಸಂಬಂಧಹೊಂದಿದ್ದೇವೆ ಎಂಬ ಪರಿಜ್ಞಾನ ಹೊಂದಿದಾಗ ಉಂಟಾಗುವ ಭಾವನೆಗಳು, ಕ್ರಿಯೆಗಳು, ಅನುಭವಗಳು – ಇವೇ ಧರ್ಮ ಎಂದು ಕರೆಯಲ್ಪಡುತ್ತವೆ." (*The Varieties of Religious Experience, p.31*)

"ಪ್ರತಿಯೊಬ್ಬ ಜೀವಿಯಲ್ಲಿಯೂ ದಿವ್ಯತೆಯು ಅಂತರ್ನಿಹಿತ ವಾಗಿದೆ. ಅದನ್ನು ಪ್ರಕಟಗೊಳಿಸುವುದೇ ಪರಮೋದ್ದೇಶ" ಎನ್ನುವ ಸ್ವಾಮಿ ವಿವೇಕಾನಂದರ ಹೇಳಿಕೆಯು ಕೂಡ ಪ್ರತಿಯೊಂದು ಧರ್ಮವೂ ದಿವ್ಯತೆಯ ಅನ್ವೇಷಣೆಯೆಂಬ ಅಂಶವನ್ನು ಗುರುತು ಮಾಡಿ ತೋರಿಸುತ್ತದೆ.

### ಪರಿವರ್ತನೆಯೇ ಪರಿಪೂರ್ಣತೆ

ಸಾಮಾನ್ಯ ಮನುಷ್ಯರಲ್ಲಿ ಈ ಪ್ರಜ್ಞಾಪೂರ್ವಕ ಪ್ರಯತ್ನವು ಅಷ್ಟಾಗಿ ಕಂಡುಬರುವುದಿಲ್ಲವಾದರೂ, ಅನುಭಾವಿಗಳಾದ ಸಂತರಲ್ಲಿ ಈ ಪ್ರಯತ್ನದ ಕಾತರತೆ, ತವಕಗಳು ವಿಶೇಷವಾಗಿ ಉದ್ದೀಪನಗೊಂಡಿರುತ್ತವೆ. ಸಂತ ಪಾಲನು ಈ ಭಾವನೆಯನ್ನು ಹೀಗೆ ವ್ಯಕ್ತಗೊಳಿಸುತ್ತಾನೆ: "ಈ ಜಗತ್ತಿಗೆ ಅಂಟಿಕೊಂಡಿರಬೇಡ. ನಿನ್ನ ಮನಸ್ಸನ್ನು ನವೀಕರಿಸಿ, ಪರಿವರ್ತನೆ ಹೊಂದು. ಇದರಿಂದ ನಿನಗೆ ಭಗವಂತನ ಇಚ್ಛೆಯೇನು ಎಂದು ಗೊತ್ತಾಗುತ್ತದೆ. ಯಾವುದು ಒಳಿತು, ಯಾವುದು ಒಪ್ಪಿಗೆಯಾದುದು ಮತ್ತು ಪರಿಪೂರ್ಣ ಎಂದು ತಿಳಿಯುತ್ತದೆ." ಒಂದು ಬಗೆಯ ಪರಿವರ್ತನೆ, ನವೀಕರಣ, ಹೊಸ ಜನ್ಮ – ಇದುವೇ ಆಧ್ಯಾತ್ಮಿಕ ಸಾಧನೆಯ ಪರಮಗುರಿ ಎಂದು ಇದರಿಂದ ಸ್ಪಷ್ಟವಾಗುತ್ತದೆ.

ಈ ಪರಿವರ್ತನೆಯು ಅಂತರಾತ್ಮವನ್ನು ಭೌತಿಕ ಬಂಧನ ದಿಂದ ಬಿಡಿಸುತ್ತದೆ. ಆಗ ಆತ್ಮವು ಚೈತನ್ಯದ ತನ್ನ ನೈಜ ನೆಲೆಯನ್ನು ಪಡೆದುಕೊಂಡು, ಸ್ವತಂತ್ರ ಪಕ್ಷಿಯ ಹಾಗೆ ಸ್ವಚ್ಛಂದವಾಗಿ ವಿಹರಿಸುತ್ತದೆ. ಶ್ರೀರಾಮಕೃಷ್ಣರು ಅಂತಹ ಆಧ್ಯಾತ್ಮಿಕ ಆನಂದವನ್ನು ನೀರಿನಿಂದ ಹೊರಗೆ ತೆಗೆದ ಮೀನನ್ನು ಪುನಃ ನೀರಿನಲ್ಲಿ ಬಿಟ್ಟಾಗ, ಅದಕ್ಕೆ ಆಗುವ ಆನಂದದಂತೆ ಇರುವುದು ಎಂದು ಬಣ್ಣಿಸುತ್ತಾರೆ. ಇಂತಹ ಆಧ್ಯಾತ್ಮಿಕ ಪರಿಪೂರ್ಣತೆಗಾಗಿ ಕೈಗೊಳ್ಳುವ ಪ್ರಜ್ಞಾಪೂರ್ವಕ ಪ್ರಯತ್ನವನ್ನೇ 'ಆಧ್ಯಾತ್ಮಿಕ ಸಾಧನೆ' ಎಂದು ಕರೆಯಬಹುದು.

### ಸಾಧಕ–ಸಾಧನೆ–ಸಾಧ್ಯ

**ಸಾಧ್ಯತೇ ಅನೇನ ಇತಿ ಸಾಧನಂ** – ಯಾವುದರಿಂದ ಸಾಧ್ಯವನ್ನು ಗಳಿಸಬಹುದೋ ಅದನ್ನು ಸಾಧನೆ ಎಂದು ಕರೆಯ ಬಹುದು. ಸಾಧನೆಗೆ **ಸಾಧಕ** ಮತ್ತು **ಸಾಧ್ಯ** ಎರಡೂ ಆವಶ್ಯಕ. ಸಾಧ್ಯವೆಂದರೆ ಇಟ್ಟುಕೊಂಡ ಗುರಿ. ಅದನ್ನು ತಲುಪಲು ಪ್ರಯತ್ನಿಸುವವನೇ ಸಾಧಕ. ಸಾಧಕನನ್ನು ಸಾಧ್ಯದೆಡೆಗೆ ಜೋಡಿಸು ವುದೇ ಸಾಧನೆ. ಇಲ್ಲಿ ಸಾಧಕನ ಉದ್ದೇಶ ಪರಮೋನ್ನತ ಆಧ್ಯಾತ್ಮಿಕ ಅನುಭವ ಅಥವಾ ಭಗವತ್ಸಾಕ್ಷಾತ್ಕಾರ. ಅದನ್ನು ತಂದು ಕೊಡುವುದೇ ಆಧ್ಯಾತ್ಮಿಕ ಸಾಧನೆ.

ಸಾಧಕನು ಸಾಧನೆಯಲ್ಲಿ ಮುಂದುವರಿಯಲು ಸಾಧ್ಯದ ಸ್ಪಷ್ಟ ಪರಿಜ್ಞಾನ ಅತ್ಯಂತ ಆವಶ್ಯಕ. ಸಾಧ್ಯವನ್ನು ತಲುಪಬೇಕೆಂಬ ಉತ್ಕಟ ಆಕಾಂಕ್ಷೆ ಈ ಮಾರ್ಗವನ್ನು ಕ್ರಮಿಸಲು ಅತ್ಯವಶ್ಯವಾದುದು. ಇದನ್ನೇ ಶ್ರೀರಾಮಕೃಷ್ಣರು **ವ್ಯಾಕುಲತೆ** ಎಂದು ಕರೆಯುತ್ತಾರೆ. ಆಧ್ಯಾತ್ಮಿಕ ಸಾಧನೆಗೆ ಬೇಕಾದ ಹತ್ತುಹಲವು ಅರ್ಹತೆಗಳಲ್ಲಿ ಇದು ಪ್ರಾಥಮಿಕವಾದುದು ಮತ್ತು ಮೂಲಭೂತವಾದುದು.

ಆಧ್ಯಾತ್ಮಿಕ ಸಾಧನೆಯ ಆವಶ್ಯಕತೆ ಮತ್ತು ಮಹತ್ವವನ್ನು ಉಪನಿಷತ್ತುಗಳಿಂದ ಮೊದಲುಗೊಂಡು, ಎಲ್ಲ ಧರ್ಮಗ್ರಂಥಗಳ ಕರ್ತೃಗಳೂ, ಅನುಭಾವಿಗಳೂ ಎತ್ತಿಹೇಳಿದ್ದಾರೆ. "ಯಾವುದರಿಂದ ನಾನು ಅಮೃತಳಾಗಲಾರೆನೋ ಅದನ್ನು ಪಡೆದು ನಾನೇನು ಮಾಡಲಿ? ಆದುದರಿಂದ, ಭಗವಾನ್, ತಾವು ಅರಿತಿರುವುದನ್ನೇ (ಅಮೃತತ್ತ್ವದ ಸಾಧನ) ನನಗೆ ಹೇಳಿರಿ" – ಇದು ಮೈತ್ರೇಯಿ ತನ್ನ ಪತಿ ಯಾಜ್ಞವಲ್ಕ್ಯನಲ್ಲಿ ಮಾಡಿಕೊಂಡ ಪ್ರಾರ್ಥನೆ. (*ಬೃಹದಾರಣ್ಯಕ ಉಪನಿಷತ್*, ೪.೫.೪) ಈ ಸಾಧನವನ್ನು ತಿಳಿದುಕೊಂಡಾಗಲೇ ಜೀವನದ ಸಾರ್ಥಕತೆಯೆಂದು ಋಷಿಗಳು ಬಗೆಯುತ್ತಾರೆ. ಇದೇ ಉಪನಿಷತ್ತಿನಲ್ಲಿ ಇನ್ನೊಂದೆಡೆ ಋಷಿಗಳು ಹೇಳುತ್ತಾರೆ: "ಈ ಶರೀರದಲ್ಲಿಯೇ ಇದ್ದುಕೊಂಡು ನಾವು ಹೇಗೋ ಬ್ರಹ್ಮತತ್ತ್ವವನ್ನು ಅರಿತುಕೊಂಡಿದ್ದೇವೆ. ಇಲ್ಲದಿದ್ದರೆ ಅಜ್ಞಾನಿಗಳಾಗುತ್ತಿದ್ದೆವು ಮತ್ತು ಇದರಿಂದ ಮಹಾವಿನಾಶವುಂಟಾಗುತ್ತಿತ್ತು. ಯಾರು ಇದನ್ನು ಅರಿತುಕೊಂಡಿರುವರೋ ಅವರು ಅಮೃತರಾಗುತ್ತಾರೆ. ಮಿಕ್ಕವರು ದುಃಖವನ್ನು ಅನುಭವಿಸುತ್ತಾರೆ" (*ಬೃಹದಾರಣ್ಯಕ ಉಪನಿಷತ್*, ೪.೪.೧೪).

ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ಪ್ರಸಂಗವೊಂದನ್ನು ಇಲ್ಲಿ ಉಲ್ಲೇಖಿಸಬಹುದು. ನಾರದನು ಸನತ್ಕುಮಾರನ ಬಳಿಗೆ ಹೋಗುತ್ತಾನೆ. "ಭಗವಂತನೇ, ನನಗೆ ಉಪದೇಶಿಸಬೇಕು" ಎಂದು ಕೇಳಿಕೊಳ್ಳುತ್ತಾನೆ. ಅದಕ್ಕೆ ಸನತ್ಕುಮಾರನು, "ನೀನು ಈಗಾಗಲೇ ಏನು ಕಲಿತಿದ್ದೀಯೋ ಅದನ್ನು ಹೇಳು" ಎನ್ನುತ್ತಾನೆ. ಆಗ ನಾರದನು ತಾನು ಕಲಿತ ಶಾಸ್ತ್ರಗಳ ದೊಡ್ಡಪಟ್ಟಿಯನ್ನೇ ಮುಂದಿಡುತ್ತಾನೆ. ತದನಂತರ ತನ್ನ ಮನಸ್ಸಿನ ಅಳಲನ್ನು ತೋಡಿಕೊಳ್ಳುತ್ತಾನೆ: " ಭಗವಾನ್, ನಾನು ಮಂತ್ರವನ್ನು ಮಾತ್ರ ಅರಿತುಕೊಂಡಿದ್ದೇನೆ (ಕರ್ಮದಲ್ಲಿ ಮಾತ್ರ ನಿಷ್ಣಾತನಾಗಿದ್ದೇನೆ). ಆತ್ಮನನ್ನು ಅರಿತುಕೊಂಡಿಲ್ಲ. ವಿದ್ವಾಂಸರಾದ ನಿಮ್ಮಂಥವರಿಂದ ಆತ್ಮವನ್ನು ಅರಿತುಕೊಂಡವನು ಶೋಕವನ್ನು ದಾಟುವನೆಂದು ನಾನು ಕೇಳಿದ್ದೇನೆ. ಭಗವಂತನೇ, ನಾನು ಶೋಕಿಸುತ್ತಿದ್ದೇನೆ. ಈ ಶೋಕದ ದಡವನ್ನು ದಾಟುವಂತೆ ದಯವಿಟ್ಟು ಮಾಡಿ." (*ಛಾಂದೋಗ್ಯೋಪನಿಷತ್ತು*, ೭–೧–೩)

ಕಠೋಪನಿಷತ್ತಿನಲ್ಲಂತೂ ಋಷಿಯು ತುಂಬು ಅನುಕಂಪದಿಂದ ಮಾನವರಿಗೆ ತನ್ನ ಧೀರೋದಾತ್ತ ಕರೆಯನ್ನು ಹೀಗೆ ನೀಡುತ್ತಾನೆ: "ಏಳಿರಿ, ಎಚ್ಚರಗೊಳ್ಳಿರಿ. ಶ್ರೇಷ್ಠರಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ. ಹರಿತವಾದ ಕತ್ತಿಯ ಅಲಗಿನಂತೆ ಮಾರ್ಗವೂ ದುರ್ಗಮವಾಗಿದೆಯೆಂದು ತಿಳಿದವರು ಹೇಳುತ್ತಾರೆ." (*ಕಠೋಪನಿಷತ್ತು,* ೧–೩–೧೪)

ಸಾಧಕನು ಆಧ್ಯಾತ್ಮಿಕ ಮಾರ್ಗವನ್ನು ಹೇಗೆ ಪ್ರವೇಶಿಸಬೇಕೆಂದು ಮುಂಡಕೋಪನಿಷತ್ತು ಹೀಗೆ ತಿಳಿಸಿಹೇಳುತ್ತದೆ: "ಬ್ರಾಹ್ಮಣನು (ಆಧ್ಯಾತ್ಮಿಕ ಸಾಧಕನು) ಕರ್ಮಗಳಿಂದ ಉಂಟಾಗಿರುವ ಲೋಕಗಳನ್ನು ಪರೀಕ್ಷಿಸಬೇಕು. ಅಕೃತವಾದದ್ದನ್ನು (ನಿತ್ಯವಸ್ತುವಾದ ಆತ್ಮ) ಅನಿತ್ಯವಾದ ಕರ್ಮಗಳಿಂದ ಪಡೆಯಲು ಆಗುವುದಿಲ್ಲ ಎಂದು ವೈರಾಗ್ಯವನ್ನು ಹೊಂದಬೇಕು." (*ಮುಂಡಕೋಪನಿಷತ್ತು,* ೧–೨–೧೨)

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಮತ್ತೆ ಮತ್ತೆ ಸಾಧನೆಯ ಮಹತ್ವವನ್ನು ಒತ್ತಿ ಹೇಳುತ್ತಾನೆ. ಅದನ್ನು ಅವನು **ಅಭ್ಯಾಸಯೋಗ** ಎಂದು ಕರೆಯುತ್ತಾನೆ : "ಅರ್ಜುನ, ಒಂದು ವೇಳೆ ನನ್ನಲ್ಲಿ ಮನಸ್ಸನ್ನು ಸ್ಥಿರವಾಗಿ ಇಡಲು ಶಕ್ತನಾಗದಿದ್ದರೆ, ಅಭ್ಯಾಸಯೋಗದ ಮೂಲಕ ನನ್ನನ್ನು ಹೊಂದುವುದಕ್ಕೆ ಇಚ್ಛೆಪಡು." (*ಭಗವದ್ಗೀತೆ,* ೧೨–೯)

ಶ್ರೀಶಂಕರಾಚಾರ್ಯರಂತೂ ತಮ್ಮ **ವಿವೇಕಚೂಡಾಮಣಿ**ಯಲ್ಲಿ ಸಾಧನೆಗೆ ಅತ್ಯಂತ ಮಹತ್ವವನ್ನು ಕೊಡುತ್ತಾರೆ: "ಮನುಷ್ಯಜನ್ಮ, ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ ಮತ್ತು ಮಹಾತ್ಮರ ಸಂಗ – ದುರ್ಲಭವಾದ ಇವುಗಳು ದೈವಾನುಗ್ರಹದಿಂದಲೇ ದೊರಕುತ್ತವೆ. ದುಃಸಾಧ್ಯವಾದ ಮನುಷ್ಯಜನ್ಮವನ್ನು ಹೇಗೋ ಪಡೆದುಕೊಂಡು....ಮೂಢಬುದ್ಧಿಯ ಯಾವ ಮನುಷ್ಯನು ತನ್ನ ಮೋಕ್ಷಕ್ಕಾಗಿ ಪ್ರಯತ್ನಿಸುವುದಿಲ್ಲವೋ ಅವನು ತನ್ನ ಆತ್ಮವನ್ನೇ ಕೊಂದುಕೊಂಡಂತೆ." (*ವಿವೇಕಚೂಡಾಮಣಿ,* ೩,೪)

ಆಧ್ಯಾತ್ಮಿಕ ಅನುಭವ ಮತ್ತು ಅದಕ್ಕಾಗಿನ ಸಾಧನೆಯ ಆವಶ್ಯಕತೆಯನ್ನು ಸ್ವಾಮಿ ಯತೀಶ್ವರಾನಂದಜಿ ಅವರು ಹೀಗೆ ವಿವರಿಸುತ್ತಾರೆ : "ಆಧ್ಯಾತ್ಮಿಕ ಜೀವನದಲ್ಲಿ ಹೊರಗಿನ ಯಾವುದನ್ನೂ ಅವಲಂಬಿಸದ ಪೂರ್ಣ ತೃಪ್ತಿಯನ್ನು ಪಡೆಯಬಹುದು. ಆದ್ದರಿಂದ ನಾರದರು ಹೇಳುತ್ತಾರೆ: 'ಅದನ್ನು (ದಿವ್ಯಪ್ರೇಮ) ಪಡೆದು ಮನುಷ್ಯನು ಸಿದ್ಧನಾಗುತ್ತಾನೆ, ಅಮೃತತ್ವವನ್ನು ಪಡೆಯುತ್ತಾನೆ ಮತ್ತು ತೃಪ್ತನಾಗುತ್ತಾನೆ'.... "

"ಹೋರಾಡದೆ ಸತ್ಯವನ್ನು ಪಡೆಯಲಾಗುವುದಿಲ್ಲ. ಇಡೀ ಜೀವನವೇ ಒಂದು ಹೋರಾಟ. ಪ್ರತಿಯೊಬ್ಬರೂ ಏನಾದರೂ ಒಂದನ್ನು ಸಾಧಿಸಲು ಶ್ರಮಿಸುತ್ತಿರುವರು. ಆಧ್ಯಾತ್ಮಿಕ ಹೋರಾಟ ಉನ್ನತ ಶ್ರೇಣಿಯದು. ಅದು ಪ್ರಜ್ಞೆಗಾಗಿ ಹೋರಾಟ. ಹೋರಾಟ! ಹೋರಾಟ! ಹೋರಾಟ! ಇದೊಂದೇ ಮಾರ್ಗ." (*ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ,* ಪುಟ ೯)

## ಶ್ರೀರಾಮಕೃಷ್ಣರ ಮಾರ್ಗದರ್ಶನ

ಆಧುನಿಕ ಯುಗದಲ್ಲಿ ಆಧ್ಯಾತ್ಮಿಕ ಸಾಧನೆಯ ಪ್ರಾಮುಖ್ಯತೆಯನ್ನು ತಮ್ಮ ಉಜ್ವಲ ಆದರ್ಶದ ಮೂಲಕ ಜಗತ್ತಿನ ಮುಂದೆ ಪ್ರಸ್ತುತಪಡಿಸಿದವರು ಶ್ರೀರಾಮಕೃಷ್ಣರು. ಸಾಧನೆಯಲ್ಲಿ ಪರಮಾದ್ಭುತವಾದ ತೀವ್ರತೆ ಮತ್ತು ಉತ್ಕಟತೆಗಳನ್ನು ಅವರು ತಮ್ಮ ಜೀವನದಲ್ಲಿ ಪ್ರಕಟಪಡಿಸಿದರು. ತಾವು ಆಯ್ಕೆ ಮಾಡಿಕೊಂಡ ಮಾರ್ಗದಲ್ಲಿ **ಪರಿಪೂರ್ಣ ತನ್ಮಯತೆ, ನಿಷ್ಕಲ್ಮಷ ಪ್ರಾಮಾಣಿಕತೆ, ಅನುಪಮ ವ್ಯಾಕುಲತೆ, ಅದಮ್ಯ ಪ್ರೀತಿ ಮತ್ತು ಅಗಣಿತ ಉತ್ಸಾಹ** – ಇವು ಅವರ ಅಸೀಮ ಸಾಧನೆಯ ಪ್ರಮುಖ ವೈಶಿಷ್ಟ್ಯಗಳು. ಶ್ರೀರಾಮಕೃಷ್ಣರ ಜೀವನವು, ಮಹಾತ್ಮ ಗಾಂಧೀಜಿ ಹೇಳುವಂತೆ, ಧರ್ಮವು ಅನುಷ್ಠಾನಯೋಗ್ಯವಾಗುವ ಉತ್ತಮ ನಿದರ್ಶನವಾಗಿದೆ.

ಶ್ರೀರಾಮಕೃಷ್ಣರ ಸಂದೇಶಗಳು ಅವರ ಜೀವನದ ಕುಲುಮೆಯಲ್ಲಿ ಬೆಂದು ಪುಟವಾದ ಚಿನ್ನದ ಗಟ್ಟಿಗಳು; ಅವರ ಅನುಭವದ ಆಧಾರದ ಮೇಲೆ ಪರಿಪುಷ್ಟವಾದ ನುಡಿಕುಸುಮಗಳು. ಸಾಧನೆಯ ಆವಶ್ಯಕತೆಯ ಬಗ್ಗೆ ಅವರು ಹೇಳುತ್ತಾರೆ: " ನೀನು ಸೇರಬೇಕೆಂದಿರುವ ಗುರಿಗೆ ಸರಿಯಾಗಿ ತಯಾರಿ ಮಾಡಿಕೋ. ಹಾಲಿನಲ್ಲಿ ಬೆಣ್ಣೆ ಇದೆ ಎಂದು ಸುಮ್ಮನೆ ಅರಚಿದರೆ ಬೆಣ್ಣೆ ಬರುವುದಿಲ್ಲ. ನಿನಗೆ ಬೆಣ್ಣೆ ಬೇಕಾದರೆ ಹಾಲನ್ನು ಮೊಸರು ಮಾಡಿ ಅದನ್ನು ಕಡೆಯಬೇಕು. ನೀನು ದೇವರನ್ನು ನೋಡಬೇಕಾದರೆ, ಸಾಧನೆಗೆ ಕೈಹಾಕು. 'ಹೇ ಭಗವಂತ! ಹೇ ಭಗವಂತ!' ಎಂದು ಸುಮ್ಮನೆ ಕೂಗುವುದರಿಂದ ಏನು ಪ್ರಯೋಜನ?" ( *ಶ್ರೀರಾಮಕೃಷ್ಣ ಉಪದೇಶಾಮೃತ,* ಪುಟ.೧೬೪)

## ಉಪಸಂಹಾರ

ಛಾಂದೋಗ್ಯೋಪನಿಷತ್ತು **ನಾಲ್ಪೇ ಸುಖಮಸ್ತಿ, ಭೂಮೈವ ಸುಖಂ** – ಅಲ್ಪವಾದುದರಲ್ಲಿ ಸುಖವಿಲ್ಲ, ಅತಿ ದೊಡ್ಡದರಲ್ಲಿ ಮಾತ್ರ ಸುಖವಿದೆ ಎಂದು ಹೇಳುತ್ತದೆ. ಉನ್ನತವಾದ ಗುರಿಯನ್ನು ಇಟ್ಟುಕೊಳ್ಳುವುದು ಮತ್ತು ಅದನ್ನು ಸಾಕಾರಗೊಳಿಸಲು ಪ್ರಯತ್ನಿಸುವುದು – ಇವು ಬದುಕಿಗೆ ಅವಶ್ಯ. ಅದರಲ್ಲೂ ಆಧ್ಯಾತ್ಮಿಕ ಗುರಿ ಮತ್ತು ಸಾಧನೆಗಳು ಮಾತ್ರವೇ ಬದುಕನ್ನು ಅರ್ಥಪೂರ್ಣವಾಗಿಸಬಲ್ಲವು. ಇದು ವೈಯಕ್ತಿಕ ಜೀವನದಲ್ಲಿ ಕಂಡುಬರುವ ವಾಸ್ತವಾಂಶ ಮಾತ್ರವಲ್ಲ, ಮಾನವ ಜನಾಂಗದ ಇತಿಹಾಸವು ನಮಗೆ ಕಲಿಸುವ ದೊಡ್ಡ ಪಾಠ ಕೂಡ ಇದೇ ಆಗಿದೆ.

ವ್ಯಕ್ತಿಗತ ಆಸಕ್ತಿಗೆ ಅನುಸಾರವಾಗಿ, ವ್ಯಕ್ತಿತ್ವದ ಹಲವು ಆಯಾಮಗಳಿಗೆ ಅನುಗುಣವಾಗಿ, ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಮುಖವಾಗಿ **ಜ್ಞಾನಯೋಗ, ಭಕ್ತಿಯೋಗ, ಧ್ಯಾನಯೋಗ** ಮತ್ತು **ಕರ್ಮಯೋಗ**ಗಳೆಂದು ನಾಲ್ಕು ಪ್ರಮುಖ ಕವಲು ಮಾರ್ಗಗಳಿವೆ. ಇವುಗಳ ಪ್ರಾಯೋಗಿಕ ಅನುಷ್ಠಾನದ ಹಲವು ವಿಧಾನಗಳನ್ನೇ ನಾವು ಮುಂದಿನ ಸಂಚಿಕೆಗಳಲ್ಲಿ ಅಧ್ಯಯನ ಮಾಡುವುದು.